# ಬಹೂಪಯೋಗಿ ತುಂಬೆ

**ತುಂಬೆ ಔಷಧೀಯ ಗುಣಗಳನ್ನು ಒಡಲಲ್ಲಿ ತುಂಬಿಕೊಂಡಿದ್ದು ಶೀತ, ಕೆಮ್ಮು, ಗ್ಯಾಸ್ಟ್ರಿಕ್‌ನಂತಹ ಸಾಮಾನ್ಯ ಸಮಸ್ಯೆಗಳಿಗೆ ರಾಮಬಾಣ. ಇದರ ಎಲೆಯನ್ನು ತಂಬುಳಿ, ಪಲ್ಯ ಮಾಡಿಯೂ ಸೇವಿಸಬಹುದು.**

■ ಡಾ. ಎನ್. ಅರ್ಚನಾ

ನಮ್ಮ ಮನೆಯ ಸುತ್ತ ಮುತ್ತ, ರಸ್ತೆ ಬದಿಯಲ್ಲಿ ಸಾಮಾನ್ಯವಾಗಿ ಕಾಣುವ ಗಿಡ ತುಂಬೆ ಗಿಡ. ಇದರ ಹೂವು ಶಿವನಿಗೆ ಪ್ರಿಯವಾದುದು. ಪುರಾಣಗಳ ಪ್ರಕಾರ ಸಮುದ್ರಮಂಥನದಲ್ಲಿ ಉತ್ಪತ್ತಿಯಾದ ಹಾಲಾಹಲ ವಿಷವನ್ನು ಶಿವನು ಸೇವಿಸಿದಾಗ ಅದರ ನಿವಾರಣೆಗೆ ತುಂಬೆ ಹೂವನ್ನು ಉಪಯೋಗಿಸಿದ್ದರಂತೆ. ಹಾಗಾಗಿ ಇಂದಿಗೂ ಶಿವನಿಗೆ ತುಂಬೆ ಹೂವಿನಿಂದ ಪೂಜಿಸುವುದು ಶ್ರೇಷ್ಠವೆನಿಸಿದೆ.

ತುಂಬೆರಸವನ್ನು ಶೀತ, ಜ್ವರ, ಕೆಮ್ಮು, ತಲೆನೋವು ಇದ್ದಾಗ ಮನೆಮದ್ದಾಗಿ ಉಪಯೋಗಿಸಬಹುದು, ಹಳ್ಳಿಗಳಲ್ಲಿ ಇದರ ಚಿಗುರು ಎಲೆಗಳಿಂದ ಪಲ್ಯ, ತಂಬುಳಿ ಮಾಡುತ್ತಾರೆ.

ಆಯುರ್ವೇದದಲ್ಲಿ ತುಂಬೆ ಗಿಡವನ್ನು ದ್ರೋಣಪುಷ್ಪ ಅಥವಾ ದ್ರೋಣಪುಷ್ಪಿ ಎಂದು ಕರೆಯುತ್ತಾರೆ. ಇದರ ಲ್ಯಾಟಿನ್ ಹೆಸರು Leucas cephalotes. 23 ಅಡಿ ಎತ್ತರಕ್ಕೆ ಬೆಳೆಯುವ ಈ ಸಸ್ಯವು ಬೇರಿನಿಂದ ತುದಿಯವರೆಗೂ ಔಷಧ ಗುಣಗಳಿಂದ ಕೂಡಿದೆ. ಬಿಳಿ, ಕೆಂಪು, ಗುಲಾಬಿ ಬಣ್ಣದ ಹೂಗಳನ್ನು ಬಿಡುತ್ತದೆ. ಬಿಳಿ ಹೂಗಳಿಂದ ಕೂಡಿದ ಗಿಡವನ್ನು ಆಯುರ್ವೇದ ಔಷಧದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಇದರ ಎಲೆಗಳನ್ನು ಕೆಮ್ಮು, ಜ್ವರ, ಅಸ್ತಮಾ ಚಿಕಿತ್ಸೆಯಲ್ಲಿ ಉಪಯೋಗಿಸಬಹುದು. ತುಂಬೆ ಗಿಡವು ಯಕೃತ್ ಉತ್ತೇಜಕ (liver stimulant) ಹಾಗಾಗಿ ಇದು ಕಾಮಾಲೆ ಕಾಯಿಲೆಗೆ ಅತ್ಯುತ್ತಮ ಔಷಧ. ಇದು ಜೀರ್ಣಶಕ್ತಿಯನ್ನು ವೃದ್ಧಿಸುತ್ತದೆ ಹಾಗೂ ಅರುಚಿ (ಆಹಾರದ ಕಡೆ ಅನಾಸಕ್ತಿ) ಯನ್ನು ಕಡಿಮೆಯಾಗಿಸುತ್ತದೆ. ಇದರ ಚಿಗುರು ಎಲೆಗಳನ್ನು ಪಲ್ಯ ಮಾಡಿ ತಿನ್ನುವುದರಿಂದ ಗ್ಯಾಸ್ಟ್ರಿಕ್



ಸಮಸ್ಯೆ ಬೇಗನೆ ಕಡಿಮೆಯಾಗುತ್ತದೆ ಹಾಗೂ ಹೊಟ್ಟೆ ಹುಳ ಸಮಸ್ಯೆಗೆ ಇದು ರಾಮಬಾಣ.

ತುಂಬೆಯು ವಿಷಘ್ನ ಎಂದು ಗ್ರಂಥಗಳಲ್ಲಿ ಹೇಳಲಾಗಿದೆ. ಇದರ ರಸವನ್ನು ಹಾವು ಹಾಗೂ ಚೇಳು ಕಚ್ಚಿದಾಗ ವಿಷವನ್ನು ಇಳಿಸಲು ಉಪಯೋಗಿಸುತ್ತಾರೆ. ಯಾವುದೇ ವಿಷಜಂತು ಅಥವಾ ಕ್ರಿಮಿ ಕೀಟಗಳು ಕಚ್ಚಿರುವ ಗಾಯವನ್ನು ಇದರ ರಸದಿಂದ ತೊಳೆಯುವುದರಿಂದ ಸೋಂಕು ಮತ್ತು ಊತ ಕಡಿಮೆ ಆಗಿ ಗಾಯವು ಸಂಪೂರ್ಣವಾಗಿ ಮಾಯುತ್ತದೆ. ಇದರ ರಸವನ್ನು ಹಚ್ಚುವುದರಿಂದ ಕಜ್ಜಿ ತುರಿಕೆ, ಚರ್ಮದ ಅಲರ್ಜಿ ತಕ್ಷಣ ವಾಸಿಯಾಗುತ್ತದೆ, ಸೋರಿಯಾಸಿಸ್‌ನಲ್ಲೂ ಬಹಳ ಪರಿಣಾಮಕಾರಿಯಾಗಿದೆ.

ತುಂಬೆಯನ್ನು ನಿಯಮಿತವಾಗಿ ಉಪಯೋಗಿಸುವುದರಿಂದ ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ, ದೇಹದಲ್ಲಿರುವ ಟಾಕ್ಸಿನ್ ಅನ್ನು ಹೊರಹಾಕುತ್ತದೆ. ಆದ್ದರಿಂದ ತುಂಬೆಯನ್ನು ಕಳೆ ಎಂದು ನಿರ್ಲಕ್ಷ್ಯ ಮಾಡದೆ ಆದಷ್ಟು ಬಳಸಿ. ತುಂಬೆಯ ಎಲೆಗಳ ಮತ್ತು ಹೂವಿನ ಪಲ್ಯ, ಚಟ್ನಿ, ತಂಬುಳಿ ಬಹಳ ರುಚಿಯಾಗಿರುತ್ತದೆ. ಬೆರಕೆ ಸೊಪ್ಪು ಮಾಡುವಾಗ ಇದನ್ನೂ ಸೇರಿಸಬಹುದು.

(ಲೇಖಕಿ ಬೆಂಗಳೂರಿನಲ್ಲಿ ಆಯುರ್ವೇದ ವೈದ್ಯೆ)

ಸರ್ವೇಜನಃ ಸುಖಿನೋ ಭವಂತುಃ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.